**<u>ದಿನಾಂಕಃ 12.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಜೆ.ಪಿ. ವಕೀಲರಿಂದಃ</u>**

1) ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1, 3 ಮತ್ತು 4 ನೇ ಪ್ರತಿವಾದಿಗಳ ಪರವಾಗಿ ಸಾಕ್ಷಿ ನುಡಿಯಲು ನಾನು ಸದರಿಯವರಿಂದ ಅಧಿಕಾರ ಪತ್ರವನ್ನು ಪಡೆದಿರುವುದಿಲ್ಲ. ವೆಂಕಟಯ್ಯರವರು ನನ್ನ ದೊಡ್ಡಪ್ಪ. ನಾನು ಮೊದಲಿನಿಂದಲೂ ಬೆಂಗಳೂರಿನಲ್ಲಿ ವಾಸವಿದ್ದು ಪ್ರಸ್ತುತ ಚನ್ನಪಟ್ಟಣಕ್ಕೆ ಬಂದಿರುತ್ತೇನೆ. ಒಟ್ಟು 25 ವರ್ಷ ನಾನು ಬೆಂಗಳೂರಿನಲ್ಲಿಯೇ ಇದ್ದೆನು. ಅಬ್ಬೂರು ಗ್ರಾಮದಲ್ಲಿ ನನ್ನ ದೊಡ್ಡಪ್ಪ ವೆಂಕಟಯ್ಯರವರು ಶೆಡ್ ಹಾಕಿಕೊಂಡು ಟೀ ಅಂಗಡಿಯನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 68/2001 ರಲ್ಲಿ 1/6 ರಂತೆ ಆಸ್ತಿಯನ್ನು ಹಂಚಿಕೆ ಮಾಡಿದ್ದರು ಎಂದರೆ ಸರಿ. ಸದರಿ ತೀರ್ಪಿನ ಮೇರೆಗೆ ಎಫ್.ಡಿ.ಪಿ 2/2009 ರಂತೆ ಪ್ರಕರಣ ದಾಖಲಿಸಿದ್ದೆವು ಎಂದರೆ ಸರಿ. ಸದರಿ ಎಫ್.ಡಿ.ಪಿ 2/2009 ರ ಪ್ರಕರಣದಲ್ಲಿ ಈ ಪ್ರಸ್ತುತ ಪ್ರಕರಣದ ವಾದಿಗಳು ಹಾಜರಾಗಿರಲಿಲ್ಲ ಎಂದರೆ ಸರಿ.

2) ಎಫ್.ಡಿ.ಪಿ 2/2009 ರ ಪ್ರಕರಣದಲ್ಲಿ ನ್ಯಾಯಾಲಯದ ನಿಯೋಗಿಯು ಸ್ವತ್ತಿಗೆ ಬಂದು ಅಳತೆ ಮಾಡಿ ದಾಖಲೆಗಳಲ್ಲಿ ಇರುವ ವಿಸ್ತೀರ್ಣಕ್ಕೂ ಸ್ಥಳದಲ್ಲಿ ಸ್ವಾಧೀನದಲ್ಲಿ ಇುರವ ವಿಸ್ತೀರ್ಣಕ್ಕೂ ವ್ಯತ್ಯಾಸ ಇದೆ ಎಂದು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 68/2001 ರ ಪ್ರಕರಣದಲ್ಲಿ ನಾನು ನೀಡಿರುವ ಸಾಕ್ಷ್ಯಾ ವಿಚಾರಣೆಗಳನ್ನು ತಿಳಿದುಕೊಂಡಿರುತ್ತೇನೆ. ಈ ಪ್ರಸ್ತುತ ದಾವೆಯ ಸ್ವತ್ತಿನ ಚಕ್ಕುಬಂದಿಯ ಒಳಗೆ ವೆಂಕಟಯ್ಯ ರವರು ಶೆಡ್ ಹಾಕಿಕೊಂಡು ಹೋಟಲ್ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಯಾವತ್ತೂ ಸಹ ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿಯು ಅದು ಖಾಲಿ ಜಾಗ ಆಗಿದೆ ಎಂದು ನುಡಿಯುತ್ತಾರೆ**.** ದಾವಾ ಸ್ವತ್ತಿನಲ್ಲಿ ವಾದಿಗಳು ಅವರ ತಂದೆಯ ಕಾಲದಿಂದಲೂ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಮೊದಲು ತಾವು ಅಲ್ಲಿ ಇದ್ದು ನಂತರ ಈಗ ಅದು ಖಾಲಿ ಜಾಗ ಆಗಿದೆ ಎಂದು ನುಡಿಯುತ್ತಾರೆ**.** ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ

ಇರದೇ ಇದ್ದರೂ ಸಹ ನಾನು ಆ ಜಾಗದಲ್ಲಿ ಮನೆ ಕಟ್ಟಲು ಮುಂದಾಗಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಎಫ್.ಡಿ.ಪಿ 2/2009 ರ ತೀರ್ಪಿನ ವಿರುದ್ಧ ಆರ್.ಎ. 2/2021 ರಂತೆ ಮೇಲ್ಮನವಿ ಸಲ್ಲಿಸಿದ್ದು ಆ ಪ್ರಕರಣ ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ಸರಿಯಲ್ಲ.  ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲಿಯೇ ನಾನು ಹಾಲಿ ವಾಸ ಇರುತ್ತೇನೆ.

**ಮರು ವಿಚಾರಣೆ:-  ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**